# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 928 (877)
ಸದಸ್ಯರ ಹೆಸರು : ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 23-02-2024
ಉತ್ತರಿಸುವ ಸಚಿವರು : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಂಪಿ ಉತ್ಸವ ನಡೆಸಲು ಸರ್ಕಾರದ ಮೂಲ ಉದ್ದೇಶವೇನು; | ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಇಂದಿನ ಜನಾಂಗಕ್ಕೆ ಪರಿಚಯಿಸುವುದರೊಂದಿಗೆ, ನಾಡಿನ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಗೆ ಉತ್ತೇಜನ ನೀಡುವ ಉದ್ದೇಶವಾಗಿದೆ. |
| ಆ) | ಹಿಂದುಳಿದ ವರ್ಗದಲ್ಲಿರುವ ವಿಶ್ವಕರ್ಮ ಸಮಾಜ ನೀಡಿರುವ ಶಿಲ್ಪಕಲೆ, ಮರ, ಕಬ್ಬಿಣ, ಚಿನ್ನ, ಬೆಳ್ಳಿಗಳಿಂದ ನಿರ್ಮಿತವಾದ ಕಲಾ ಶಿಲ್ಪಗಳಿದ್ದು, ಈ ಸಮಾಜ ನೀಡಿರುವ ಕೊಡುಗೆಗಳಿಂದಲೇ ಪ್ರಪಂಚದಾದ್ಯಂತ ಎಲ್ಲಾ ದೇಶಗಳಿಂದ ಪ್ರವಾಸಿಗಳು ಹಂಪಿಗೆ ಭೇಟಿ ನೀಡುತ್ತಿದ್ದು, ಈ ದೇಶದ ಸಂಸ್ಕೃತಿ, ಇತಿಹಾಸ ಮತ್ತು ಶ್ರೀ ಕೃಷ್ಣದೇವರಾಯರ ಆಳ್ವಿಕೆ ಅರಿಯಲು ಬರುತ್ತಿರುವುದು ನಿಜವಲ್ಲವೇ; | ಹೌದು.<br>ಪ್ರಪಂಚದಾದ್ಯಂತ ಎಲ್ಲಾ ಪ್ರವಾಸಿಗರು ಹಂಪಿಗೆ ಭೇಟಿ ನೀಡುವ ಉದ್ದೇಶಗಳಲ್ಲಿ ಹಂಪಿಯಲ್ಲಿರುವ ವಾಸ್ತುಶಿಲ್ಪ, ಶಿಲ್ಪಕಲೆ, ಇಲ್ಲಿನ ಸಂಸ್ಕೃತಿ ಹಾಗೂ ಇತಿಹಾಸವನ್ನು ಅರಿಯುವುದು ಒಂದು ಅಂಶವಾಗಿದೆ. |
| ಇ) | ಈ ಸಮಾಜಕ್ಕೆ ವಿಶ್ವಕರ್ಮರ ಕೊಡುಗೆ ಅಪಾರವಾಗಿದ್ದು, ಸರ್ಕಾರ ಪ್ರತಿವರ್ಷ ನಡೆಸುವ ಹಂಪಿ ಉತ್ಸವದಲ್ಲಿ ವಿಶ್ವಕರ್ಮ ಸಮುದಾಯದವರಿಗೆ ಯಾವ ರೀತಿಯ ಗೌರವಗಳನ್ನು ವೇದಿಕೆ ಮೇಲೆ ನೀಡಲಾಗುತ್ತಿದೆ; | ಹಂಪಿ ಉತ್ಸವದಲ್ಲಿ ಮುಖ್ಯ ಆಕರ್ಷಣೆಗಳಲ್ಲಿ ಒಂದಾದ ಚಿತ್ರಕಲಾ ಶಿಬಿರ ಹಾಗೂ ಶಿಲ್ಪಕಲಾ ಶಿಬಿರದ ಮುಖ್ಯ ಸಂಚಾಲಕರನ್ನಾಗಿ ವಿಶ್ವಕರ್ಮ ಸಮುದಾಯಕ್ಕೆ ಸೇರಿದ ವ್ಯಕ್ತಿಗಳನ್ನೇ ಮಾಡಲಾಗಿರುತ್ತದೆ. |
| ಈ) | ವಿಶ್ವಕರ್ಮ ಸಮಾಜದಲ್ಲಿ 67 ಜನ ಪೀಠಾಧಿಪತಿಗಳು ಹಾಗೂ ಮಠಾಧಿಪತಿಗಳಿದ್ದರು ಅವರಲ್ಲಿ ಯೊರೊಬ್ಬರನ್ನು ಆಹ್ವಾನಿಸದೆ ಆ ಸಮಾಜದ ಯಾವೊಬ್ಬ ಗಣ್ಯರನ್ನು ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡದೇ ಕೇವಲ ಹಂಪಿ ಉತ್ಸವ ಎಂಬ ಹೆಸರಿನಲ್ಲಿ ಆಚರಿಸುವುದರ ಹಿನ್ನಲೆಯೇನು; ವಿಶ್ವಕರ್ಮ ಸಮಾಜ ಹಿಂದುಳಿದ ವರ್ಗದಲ್ಲಿದ್ದು, ಕಡಿಮೆ ಜನಸಂಖ್ಯೆ ಎಂಬ ನಿರ್ಲಕ್ಷ್ಯವೇ; | ಶಿಷ್ಟಾಚಾರದನ್ವಯ ಗಣ್ಯಮಾನ್ಯರನ್ನು ಆಹ್ವಾನಿಸಲಾಗಿದೆ. |
| ಉ) | ಈ ಸಮಾಜದಲ್ಲಿರುವವರೆಲ್ಲರೂ ಮುಗ್ಧರು, ರಾಜಕೀಯ ಪ್ರವೇಶಕ್ಕೆ ಅನರ್ಹರು ಎಂದು ಇವರುಗಳನ್ನು ಗೌರವಿಸದೆ ನಿರ್ಲಕ್ಷ್ಯ ಮಾಡಿದ್ದು ಹಾಗೂ ಯಾವುದೇ ಕಾರ್ಯಕ್ರಮಗಳ ವಿರುದ್ಧ ಧಿಕ್ಕರಿಸುವ ಹೋರಾಟ ಮಾಡುವ ಮನೋಭಾವ ಇಲ್ಲವೆಂಬ ತೀರ್ಮಾನಕ್ಕೆ ಬಂದಿದೆಯೇ; ಇಲ್ಲದಿದ್ದಲ್ಲಿ, ಈ ಸಮಾಜಕ್ಕೆ ಇಂತಹ ಕಾರ್ಯಕ್ರಮಗಳಿಗೆ ಆಹ್ವಾನಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? | ಸಮಾಜದಲ್ಲಿ ಯಾರೊಬ್ಬರನ್ನು ಅಗೌರವದಿಂದ ಕಾಣುವುದಿಲ್ಲ. ಹೀಗಾಗಿ ಯಾರನ್ನು ನಿರ್ಲಕ್ಷ್ಯ ಮಾಡಿರುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಕಸಂವಾ 31 ಕವಿಸ 2024.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.